

# ಗರ್ಭಕಂಠ ಕ್ಯಾನ್ಸರ್ ಗುಣಪಡಿಸಬಹುದು

ಗರ್ಭಕಂಠ ಅಥವಾ ಗರ್ಭಕೊರಳಿನ ಕ್ಯಾನ್ಸರ್ ಮಹಿಳೆಯರನ್ನು ಹೆಚ್ಚಾಗಿ ಬಾಧಿಸುವ ಕ್ಯಾನ್ಸರ್‌ಗಳಲ್ಲೊಂದು. ಇದರ ನಿವಾರಣೆಗೆ ಪರಿಣಾಮಕಾರಿಯಾದ ಲಸಿಕೆ ಈಗ ಲಭ್ಯವಿದ್ದು, ಇದನ್ನು ಪಡೆದರೆ ಮುಂದೆ ಬರುವ ಸಂಭವನೀಯ ಗರ್ಭ ಕ್ಯಾನ್ಸರ್ ಅನ್ನು ತಡೆಗಟ್ಟುವ ಸಾಧ್ಯತೆ ಇದೆ.

■ ಉಮಾ ಅನಂತ್

ಮದುವೆಯಾಗಿ ನಾಲ್ಕು ವರ್ಷಗಳಾದರೂ ಮಗುವಾಗಲಿಲ್ಲ ಎಂಬ ಕಾರಣಕ್ಕೆ ಸ್ತ್ರೀರೋಗ ತಜ್ಞರನ್ನು ಭೇಟಿಯಾದ ಬೆಂಗಳೂರಿನ ನಮಿತಾಗೆ ಆಘಾತ ಕಾದಿತ್ತು. ತಪಾಸಣೆ ಮಾಡಿದಾಗ ಗರ್ಭಕೊರಳಿನ ಕ್ಯಾನ್ಸರ್ ಈಕೆಯ ಬಾಳಿಗೆ ಉರುಳು ಹಾಕಿಕೊಂಡಿತ್ತು. ಆರಂಭಿಕ ಹಂತದಲ್ಲಿ ಇದ್ದ ಕಾರಣ ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆದ ನಮಿತಾ ಪ್ರಾಣಾಪಾಯದಿಂದ ಪಾರಾಗಿದ್ದರು.

ಈಗೀಗ ಮಹಿಳೆಯರಲ್ಲಿ ಗರ್ಭಕಂಠ ಕ್ಯಾನ್ಸರ್ ಹೆಚ್ಚುತ್ತಿದೆ. ಬಹುತೇಕ ಪ್ರಕರಣಗಳಲ್ಲಿ ಆರಂಭದಲ್ಲಿ ಈ ಕ್ಯಾನ್ಸರ್ ಪತ್ತೆಯಾಗುವುದೇ ಇಲ್ಲ. ಕೊನೆಯ ಹಂತದಲ್ಲಿ ಪತ್ತೆಯಾಗುವ ವೇಳೆಯಲ್ಲಿ ಪರಿಸ್ಥಿತಿ ಕೈಮೀರಿ ಹೋಗಿರುತ್ತದೆ. ಅದರಲ್ಲೂ ಗ್ರಾಮೀಣ ಭಾಗದಲ್ಲಿನ ಮಹಿಳೆಯರಲ್ಲಿ ಈ ಗರ್ಭಕಂಠ ಕ್ಯಾನ್ಸರ್ ಬಗ್ಗೆ ಜಾಗೃತಿ ಇಲ್ಲದ ಕಾರಣ ಈ ಕ್ಯಾನ್ಸರ್ ಕೊನೆ ಹಂತ ತಲುಪುವವರೆಗೂ ಅವರಿಗೆ ಅರಿವೇ ಇರುವುದಿಲ್ಲ. ಇದು ತಿಂಗಳ ಮಾಸಿಕ ಚಕ್ರದ ಸಮಸ್ಯೆ ಎಂದು ನಿರ್ಲಕ್ಷ್ಯ ಮಾಡಿಬಿಡುತ್ತಾರೆ. ಈ ನಿರ್ಲಕ್ಷ್ಯ ಪ್ರಾಣಕ್ಕೇ ಮುಳುವಾಗುವ ಅಪಾಯವೂ ಇದೆ.

ಮಹಿಳೆಯರನ್ನು ಹೆಚ್ಚು ಕಾಡುವ ಕ್ಯಾನ್ಸರ್‌ಗಳಲ್ಲಿ ಈ ಗರ್ಭಕಂಠ ಕ್ಯಾನ್ಸರ್ ನಾಲ್ಕನೆಯ ಸ್ಥಾನದಲ್ಲಿದೆ. ಹೆಚ್ಚಿನ ಪ್ರಕರಣಗಳಲ್ಲಿ ಈ ಕ್ಯಾನ್ಸರ್, ಲೈಂಗಿಕ ಸಂಪರ್ಕದಿಂದ ಹರಡುವ ಹ್ಯೂಮನ್ ಪ್ಯಾಪಿಲೋಮ ವೈರಸ್‌ನಿಂದ (ಎಚ್‌ಪಿವಿ) ಉಂಟಾಗುತ್ತದೆ. ಈ ವೈರಸ್ ಅಸುರಕ್ಷಿತ ಲೈಂಗಿಕ ಕ್ರಿಯೆಯಿಂದ ಹರಡುತ್ತದೆ. ಕೆಲವರು ಅತಿಯಾದ ಧೂಮಪಾನ ಮಾಡುವುದರಿಂದ, ಗರ್ಭ ನಿರೋಧಕ ಮಾತ್ರೆಗಳನ್ನು ಅತಿಹೆಚ್ಚು ಸೇವಿಸುವುದರಿಂದಲೂ ಈ ಕ್ಯಾನ್ಸರ್ ಬರುವ ಸಾಧ್ಯತೆ ಇದೆ. ಆದರೆ, ಶೇ.99ರಷ್ಟು ಎಚ್‌ಪಿವಿ ವೈರಸ್‌ನಿಂದಲೇ ಈ ಕ್ಯಾನ್ಸರ್ ಹರಡುತ್ತದೆ ಎಂಬುದು ವೈದ್ಯಕೀಯವಾಗಿ ಸಾಬೀತಾಗಿದೆ. ಎಲ್ಲ ವಯೋಮಾನದ ಮಹಿಳೆಯರನ್ನೂ ಕಾಡಬಹುದು.

ಒಂದು ಅಧ್ಯಯನದ ಪ್ರಕಾರ ಭಾರತದಲ್ಲಿ ಗರ್ಭಕಂಠ ಕ್ಯಾನ್ಸರ್‌ಗೆ 1.25 ಲಕ್ಷ ಮಹಿಳೆಯರು